MVC No.1221/2023
PW–1 ಸಿದ್ದೇಶ
Date: 23.07.2026

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎಸ್ ಎನ್ ಪಿ ವಕೀಲರಿಂದ</u>**

ನಾನು ಕುರಿ ಕಾಯುವ ಕೆಲಸವನ್ನು ಮಾಡುತ್ತೇನೆ. ನಾನು ಜನಿಸಿದಾಗಿನಿಂದಲೂ ಹೊಟ್ಟೆಪ್ಪನಹಳ್ಳಿಯಲ್ಲಿ ವಾಸವಾಗಿದ್ದೇನೆ. ನಾನು ಎಂಟು ವರುಷಗಳಿಂದ ಕುರಿ ಕಾಯುವ ಕೆಲಸವನ್ನು ಮಾಡುತ್ತಿದ್ದೇನೆ. ನನಗೆ ಸೇರಿದ 20 ಕುರಿಗಳು ಇವೆ. ಅವುಗಳನ್ನು ನಾನು ಏಳೆಂಟು ವರುಷಗಳಿಂದ ಸಾಕಿರುತ್ತೇನೆ. ನಾನು ನನಗೆ ಸೇರಿದ ಕುರಿಗಳನ್ನು ಮಾತ್ರ ಕಾಯುತ್ತೇನೆ. ಅಪಘಾತ ದಿನಾಂಕ 29.08.2023 ರಂದು ಆಗಿರುತ್ತದೆ. ಅಪಘಾತ ಕಮ್ಮತ್ ಮರಿಕುಂಟೆ ಗ್ರಾಮದ ಬಳಿ ಆಗಿರುತ್ತದೆ. ಸದರಿ ರಸ್ತೆ ಯಾವುದು ಎಂದು ನನಗೆ ಈಗ ಹೇಳಲಾಗುವುದಿಲ್ಲ . ಅಪಘಾತವಾದ ರಸ್ತೆ ಟಾರ್ ರಸ್ತೆ ಎಂದರೆ ಸರಿ. ಅಪಘಾತವಾದ ರಸ್ತೆ ಎಷ್ಟು ಅಡಿ ಅಗಲ ಇದೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಅಪಘಾತವಾದ ದಿವಸ ನನಗೆ ಸೇರಿದ 30 ಕುರಿಗಳನ್ನು ಕಾಯಲು ಕರೆದುಕೊಂಡು ಹೋಗಿದ್ದೆನು. ಸದರಿ ಸಮಯದಲ್ಲಿ ನನ್ನ ಮುಂದೆಯಾಗಲಿ ನನ್ನ ಹಿಂದೆಯಾಗಲಿ ಯಾವುದೇ ಕುರಿಯ ಹಿಂಡು ಬಂದಿರಲಿಲ್ಲ. ನಾನು ಬೇರೆ ಯಾರ ಕುರಿಗಳನ್ನು ಕೂಡ ಮೇಯಿಸಲು ಕರೆದುಕೊಂಡು ಹೋಗಿರಲಿಲ್ಲ. ನಾನು ಕರೆದುಕೊಂಡು ಹೋದ ಕುರಿಗಳು ಎಲ್ಲಾ ದೊಡ್ಡ ಕುರಿಗಳೆ ಆಗಿದ್ದವು. ಅವು ಆರೇಳು ವರುಷಗಳ ಕುರಿಗಳಾಗಿದ್ದವು. ನನಗೆ ಸೇರಿದ ಎಂಟು ಕುರಿಗಳು ಮತ್ತು ಎರಡು ದೊಡ್ಡ ಪಟ್ಲೆಗಳು ಸತ್ತಿದ್ದವು. ನನಗೆ ಸೇರಿದ ಎಂಟು ಕುರಿಗಳಿಗೆ ಗಾಯಗಳು ಕೂಡ ಆಗಿದ್ದವು. ಅವುಗಳ ಕಾಲುಗಳು ಮುರಿದಿದ್ದವು. ಅಪಘಾತದಲ್ಲಿ ಸತ್ತ ಕುರಿಗಳ ಬಗ್ಗೆ ನಾನು ಅವುಗಳ ಶವ ಪರೀಕ್ಷಾ ವರದಿಗಳನ್ನು ಮತ್ತು ಗಾಯಗೊಂಡ ಕುರಿಗಳ ಗಾಯದ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೆಚ್ಚಿನ ಪರಿಹಾರ ಪಡೆಯಲು ಗಾಯದ ಪ್ರಮಾಣ ಪತ್ರಗಳನ್ನು ಮತ್ತು ಶವ ಪರೀಕ್ಷಾ ವರದಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಕುರಿಗಳಲ್ಲಿ ಎರಡರಿಂದ ಮೂರು ಕುರಿಗಳು ಮರಿ ಹಾಕುತ್ತಿದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕುರಿ ಹಾಲುನ್ನು ಮಾರಾಟ ಮಾಡುತ್ತಿದ್ದೆನು ಮತ್ತು ಅದರಿಂದ ಮಾಸಿಕ 30 ಸಾವಿರ ರೂಪಾಯಿ ಆದಾಯವನ್ನು ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಾಯದ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ.

ಒಂದು ಹೆಣ್ಣು ಕುರಿಗೆ 40 ಸಾವಿರ ರೂಪಾಯಿ ಮತ್ತು ಗಂಡು ಕುರಿಗೆ 35 ಸಾವಿರ ರೂಪಾಯಿ ಬೆಲೆ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುರಿಗಳ ಬೆಲೆ ಅಪಘಾತವಾದ ಸಮಯದಲ್ಲಿ 5 ರಿಂದ 6 ಸಾವಿರ ರೂಪಾಯಿ ಮಾತ್ರ ಇತ್ತು ಎಂದರೆ ಸರಿಯಲ್ಲ.

ಅಪಘಾತವಾದ ಸಮಯದಲ್ಲಿ ಟಿಪ್ಪರ್ ಲಾರಿ ಬಂದು ಕುರಿಗಳಿಗೆ ಡಿಕ್ಕಿಪಡಿಸಿತು. ಲಾರಿ ಬಂದಾಗ ನಾನು ರಸ್ತೆಯ ಬದಿಯಲ್ಲಿ ಇದ್ದೆನು. ನಾನು ಕುರಿಗಳನ್ನು ರಸ್ತೆ ಮಧ್ಯದಲ್ಲಿ ಹೊಡೆದುಕೊಂಡು ಹೋಗುತ್ತಿದ್ದೆನು ಎಂದರೆ ಸರಿಯಲ್ಲ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಸಂಬವಿಸಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಗೊಂಡ ಮತ್ತು ಮೃತ ಕುರಿಗಳು ನನಗೆ ಸೇರಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ